25-30 ವರ್ಷಗಳಿಂದ ಯಾರು ಕೃಷಿ ಕಾರ್ಮಿಕರು ಇದ್ದಾರೆ, ಒಂದು ಎಕರೆ ಜಮೀನು ಇಲ್ಲ, ಕಡು ಬಡವರು ಎಂದು ನೀವು ಗುರ್ತಿಸಿದ್ದೀರಿ ಅವರಿಗೂ ಕೂಡ ಇವರ ಜೊತೆಯಲ್ಲಿ ಸಾಗುವಳಿ ಚೀಟಿಯನ್ನು ಕೊಡತಕ್ಕದ್ದು ಧರ್ಮ ಅಲ್ಲವೆ?

ಇನ್ನು ಎರಡನೆಯದಾಗಿ ಈ ಬಗರ್ ಹುಕುಂ ಗೋಮಾಳ ಜಮೀನನ್ನು ಅವರಿಗೆ ಕೊಡುತ್ತಾರೆಂದು ತಿಳಿದಕೊಡಲೇ ಪ್ರಭಾವಿ ವ್ಯಕ್ತಿಗಳು ಈಗಾಗಲೇ ಅಲ್ಲಿ ಸಾಗುವಳಿಯನ್ನು ಮಾಡುವುದಕ್ಕೆ ಪ್ರಾರಂಭಸುವುದು ಸ್ವಾಭಾವಿಕ. ಆದ್ದರಿಂದ ತಾವು ಕೂಡಲೇ ಕ್ರಮ ತೆಗೆದುಕೊಂಡು ಸಾಗುವಳಿ ಆಗಿರುವುದು ಯಾವುದು, ಆಗದೇ ಇರುವುದು ಯಾವುದು ಎಂಬುದನ್ನು ಗುರ್ತಿಸಿ, ಊರಿನಲ್ಲಿ ಬಡವರು ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಜಾನುವಾರುಗಳಿಗೆ ಮೇವನ್ನು ಕೊಡಲು ಗೋಮಾಳಗಳನ್ನು ಉಳಿಸಿಕೊಳ್ಳುವುದು ಬಹಳ ಅಗತ್ಯವಾಗಿದೆ. ಇದರ ಬಗ್ಗೆ ಕ್ರಮ ತೆಗೆದುಕೊಂಡು ಯಾರು ಕಡು ಬಡವರು , ಕೃಷಿ ಕಾರ್ಮಿಕರು ಇದ್ದಾರೆ ಅವರಿಗೆ ಇದನ್ನು ಕೊಡುತ್ತೀರಾ? ಮತ್ತು ಸಾಗುವಳಿ ಆಗದೇ ಇರುವ ಗೋಮಾಳವನ್ನು ಸರ್ವೆ ಮಾಡಿಸಿ ಇನ್ನು ಮುಂದೆ ಒಂದು ಗುಂಟೆ ಜಾಗಕ್ಕೂ ಯಾರೂ ಪ್ರವೇಶ ಮಾಡದಂತೆ ಗ್ರಾಮೀಣ ಜನರ ಅಭಿವೃದ್ಧಿಗೋಸ್ಕರ ಮೀಸಲಿಡದೇ ಹೋದರೆ, ಗ್ರಾಮಾಂತರ ಪ್ರದೇಶದಲ್ಲಿ ಒಂದು ಗುಂಟೆ ಜಮೀನೂ ಕೂಡ ಉಳಿಯುವುದಿಲ್ಲ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಹೌಸ್ ಸೈಟ್ಸ್ ಮತ್ತು ಎಸ್‌ಸಿ, ಎಸ್‌ಟಿ, ಗಳಿಗೆ ಮಾತ್ರ ನಾವು ರೆಗ್ಯುಲರೈಸ್ ಮಾಡುತ್ತೇವೆ, ಉಳಿದವರಿಗೆ ಮಾಡುವುದಿಲ್ಲ. ಉಳಿದ ಜಮೀನನ್ನು ಸಾರ್ವಜನಿಕ ಉದ್ದೇಶಕೋಸ್ಕರ ಇಡುತ್ತೇವೆಂದು ಸ್ಪಷ್ಟಪಡಿಸುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೆಗಳು.

ರಾಜ್ಯದಲ್ಲಿ ರಸಗೊಬ್ಬರದ ದಾಸ್ತಾನು

2301 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಕೇಂದ್ರ ಬಜೆಟ್ ಪೂರ್ವದಲ್ಲಿ ದಾಸ್ತಾನಾಗಿದ್ದ ರಸಗೊಬ್ಬರದ ಪ್ರಮಾಣವೆಷ್ಟು ಮತ್ತು ಇದರ ಒಟ್ಟು ಅಂದಾಜೆಷ್ಟು?*

ಆ) *ರಾಜ್ಯ ಸ್ವಾಮ್ಯದ ಕೃಷಿ ಕೈಗಾರಿಕಾ ನಿಗಮ ಮತ್ತು ರಾಜ್ಯ ಮಾರ್ಕೆಟಿಂಗ್ ಫೆಡರೇಷನ್ ಹಾಗೂ ಏಜೆಂಟರ ಇದ್ದ ರಸಗೊಬ್ಬರ ಹಾಗೂ ಕ್ರಿಮಿನಾಶಕಗಳ ಪ್ರಮಾಣವೇನು?*

ಇ) *ಈ ಬಜೆಟ್ ನಂತರದ ಬೆಲೆ ಏರಿಕೆಯಿಂದಾಗಿ ರೈತರಿಗಾಗಿರುವ ತೊಂದರೆ ಪರಿಹರಿಸಲು ರಾಜ್ಯ ಸರ್ಕಾರ ಕೈಗೊಂಡ ಕ್ರಮಗಳೇನು?*

ಶ್ರೀ ಎನ್. ಚಿಕ್ಕೆಗೌಡ (ಕೃಷಿ ಸಚಿವರು):

ಅ) ರಾಜ್ಯದಲ್ಲಿ ಕೇಂದ್ರದ ಬಜೆಟ್ ಪೂರ್ವದಲ್ಲಿ ಅಂದರೆ ದಿನಾಂಕ 24-7-91ರಂದು ಇದ್ದ ಒಟ್ಟು ವಿವಿಧ ರಸಗೊಬ್ಬರಗಳ ದಾಸ್ತಾನು (ತಯಾರಕರೂ ಸೇರಿದಂತೆ) 2,01, 145 ಮೆಟ್ರಿಕ್ ಟನ್ನುಗಳು. ಇದರ ಒಟ್ಟು ಅಂದಾಜು ಬಜೆಟ್ ಪೂರ್ವದ ಬೆಲೆಯ ಪ್ರಕಾರ 50.02 ಕೋಟಿ ರೂಪಾಯಿಗಳು.

ಆ) ರಾಜ್ಯದ ಕೃಷಿ ಕೈಗಾರಿಕಾ ನಿಗಮ, ರಾಜ್ಯ ಸಹಕಾರಿ ಮಾರಾಟ ಮಹಾ ಮಂಡಳಿ ಮತ್ತು ಖಾಸಗಿ ಮಾರಾಟಗಾರರ ಬಳಿ ಇದ್ದ ರಸಗೊಬ್ಬರದ ದಾಸ್ತಾನಿನ ವಿವರ ಈ ರೀತಿ ಇದೆ:

1) ಕೃಷಿ ಕೈಗಾರಿಕಾ ನಿಗಮ - 4,771 ಟನ್‌ಗಳು

2) ಮಾರ್ಕೆಟಿಂಗ್ ಫೆಡರೇಷನ್ - 60,960 ಟನ್‌ಗಳು

3) ಖಾಸಗಿ ಮಾರಾಟಗಾರರು - 80,371 ಟನ್‌ಗಳು

ಕ್ರಿಮಿನಾಶಕಗಳ ದಾಸ್ತಾನು ಈ ಕೆಳಗಿನಂತಿದೆ

	ದ್ರಾವಣಗಳು (ಲೀಟರ್‌ಗಳು)	ಹುಡಿ (ಟನ್ನು)
ಕೈ.ಕೈ.ನಿಗಮ	28569	226.33
ಕ.ರಾ.ಸ.ಮಾ.ಮ	19852	127.72
ಖಾಸಗಿ	190500	3124.00
ಒಟ್ಟು	**238921**	**4478.05**

ಇ) ರಸಗೊಬ್ಬರಗಳ ಬೆಲೆಯನ್ನು ಶೇ.30 ರಷ್ಟು ಹೆಚ್ಚಿಸಿ ಸಣ್ಣ ಮತ್ತು ಅತಿ ಸಣ್ಣ ರೈತರ ಮೇಲೆ ಇದರ ಹೊರೆ ಬೀಳದಂತೆ ಅವರಿಗೆ ಬಜೆಟ್ ಪೂರ್ವ ಬೆಲೆಯಲ್ಲೇ ರಸಗೊಬ್ಬರಗಳನ್ನು ಪೂರೈಸಲು ಕೇಂದ್ರ ಸರ್ಕಾರ ತೀರ್ಮಾನಿಸಿದೆ. ಬೆಲೆಗಳ ಹೆಚ್ಚುವರಿ ಮತ್ತು ದ್ವಿಮುಖ ಬೆಲೆಗಳ ವಿರುದ್ಧ ಬಂದಿರುವ ಅಭಿಪ್ರಾಯಗಳನ್ನು ಕೇಂದ್ರ ಸರ್ಕಾರದ ಗಮನಕ್ಕೆ ತರಲು ಮಾನ್ಯ ಮುಖ್ಯ ಮಂತ್ರಿಗಳ ನೇತೃತ್ವದಲ್ಲಿ ಸರ್ವಪಕ್ಷಗಳ ನಿಯೋಗವನ್ನು ಕಳುಹಿಸಲಾಗುವುದು.

ರಾಣೆಬೆನ್ನೂರಿನಲ್ಲಿ ಬೆಳೆಗೆ ಹ್ಯಾಣಿಗಳಿಂದ ಆದ ಹಾನಿ

2501 - ಶ್ರೀ ಕೆ.ಬಿ. ಕೋಳಿವಾಡ (ರಾಣೆಬೆನ್ನೂರು): ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಣೆಬೆನ್ನೂರು ತಾಲ್ಲೂಕಿನಲ್ಲಿ ಕಾಡು ಹಂದಿ ಮತ್ತು ಜಿಗರಿಗಳಿಂದ ರೈತರ ಬೆಳೆಗೆ ಸಾಕಷ್ಟು ಹಾನಿಯಾಗುತ್ತಿರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರವು ಇದಕ್ಕೆ ಪರಿಹಾರವನ್ನೇನಾದರೂ ಕಂಡು ಹಿಡಿಯುವುದೇ?

ಶ್ರೀ ಇ.ಟಿ. ಶಂಭುನಾಥ (ಅರಣ್ಯ ರಾಜ್ಯ ಸಚಿವರು):

ಅ) ಹೌದು

ಆ) ತೊಂದರೆಗೊಳಗಾದ ರೈತರಿಗೆ ಸಂಬಂಧಪಟ್ಟ ದಾಖಲಾತಿಗಳನ್ನು ಒದಗಿಸುವಂತೆ ತಿಳಿಸಲಾಗಿದೆ. ದಾಖಲಾತಿಗಳು ಬಂದ ನಂತರ ಹಾಲಿ ಸರ್ಕಾರಿ ಆದೇಶದಂತೆ ಜಿಗರಿಗಳಿಂದಾದ ಬೆಳೆ ನಷ್ಟಕ್ಕೆ ಪರಿಹಾರವನ್ನು ಕೊಡಲು ಶೀಘ್ರ ಕ್ರಮ ಕೈಗೊಳ್ಳಲಾಗುವುದು.

ರಸಗೊಬ್ಬರಕ್ಕೆ ಸಹಾಯಧನ

2499 - ಶ್ರೀಮತಿ ಮಲ್ಲಾಜಮ್ಮ (ಮಳವಳ್ಳಿ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಸಗೊಬ್ಬರಕ್ಕೆ ಸಬ್ಸಿಡಿಯನ್ನು ಕೊಡತಕ್ಕ ಅಲೋಚನೆ ರಾಜ್ಯ ಸರ್ಕಾರಕ್ಕೆ ಇದೆಯೇ? ಇದ್ದಲ್ಲಿ ಶೇಕಡಾ ಎಷ್ಟು ಕೊಡಲಾಗುವುದು?

ಆ) ಎಲ್ಲಾ ರೈತರಿಗೆ ಸಬ್ಸಿಡಿಯ ರೂಪದಲ್ಲಿ ರಸಗೊಬ್ಬರ ವಿತರಣೆ ಮಾಡುವ ಬಗ್ಗೆ ಸರ್ಕಾರವು ಯಾವ ಕ್ರಮ ಕೈಗೊಂಡಿದೆ?

ಇ) ಬಿತ್ತನೆಯ ಬತ್ತ ಹಾಗೂ ಇತರೆ ಬಿತ್ತನೆ ಧಾನ್ಯಗಳನ್ನು ಸಕಾಲದಲ್ಲಿ ಸಂಬಂಧಪಟ್ಟ ತಾಲ್ಲೂಕುಗಳಲ್ಲಿ ಸಂಗ್ರಹಣೆಯನ್ನು ಮಾಡುವ ಬಗ್ಗೆ ಸರ್ಕಾರವು ಗಮನ ಹರಿಸಿದೆಯೇ?